# ಸಾಮೂಹಿಕ ಕಲ್ಯಾಣ ಮಹೋತ್ಸವ

**ಚಿತ್ರದುರ್ಗ ಜೂ. 5** – ಇಂದು ಚಂದ್ರಗ್ರಹಣ. ವಧು-ವರರು ಯಾರು ಭಯಪಡಬೇಡಿ. ಅದು ನಿಸರ್ಗದ ನಿಯಮ ಎಂದು ಹೇಳುತ್ತ, ಮಾನವ ಬದುಕಿಗೆ ರೋಗಾದಿಗಳು ಕಾಡುತ್ತವೆ. ಗಿಡ-ಮರಗಳಿಗೂ ರೋಗಾದಿಗಳಿವೆ. ನಿಸರ್ಗ ನಿರ್ಮಿತವಾಗಿರುವ ರೋಗಾದಿಗಳು, ಮಾನವ ನಿರ್ಮಿತವಾಗಿರುವ ರೋಗಾದಿಗಳ ನಡುವೆ ನಾವಿಂದು ಕರೋನಾ ಎನ್ನುವ ಕರಾಳ ಕಬ್ಜದಲ್ಲಿz್ದÉೀವೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ನಗರದ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಮತ್ತು ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ ಹಾಗೂ ಕರ್ನಾಟಕ ಅರಣ್ಯ ಇಲಾಖೆ ಚಿತ್ರದುರ್ಗ ಇವರ ಸಹಯೋಗದಲ್ಲಿ ಆಯೋಜಿಸಿದ್ದ 30ನೇ ವರ್ಷದ 6ನೇ ತಿಂಗಳ ಸಾಮೂಹಿಕ ಕಲ್ಯಾಣ ಮಹೋತ್ಸವ ಮತ್ತು ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಶ್ರೀಗಳು ಮಾತನಾಡಿದರು.

ಇಡೀ ಜಗತ್ತನ್ನು ಆವರಿಸಿಕೊಂಡಿರುವ ಕರೋನಾ ಜನರಲ್ಲಿ ಅಸಹಾಯಕತೆಯನ್ನು, ಸಾಮಾಜಿಕ ಅಂತರವನ್ನು ಸೃಷ್ಟಿಸಿದೆ. ಮಾನವ ದನಕರುಗಳಿಗೆ ಮೂಗುದಾರ ಹಾಕಿದರೆ ಇಂದು ಕರೋನಾ ಮಾನವನಿಗೆ ಮೂಗುದಾರ ಹಾಕಿದೆ. ಈ ರೋಗ ಕಾಣದಿದ್ದರೂ ಕಾಡುತ್ತದೆ. ದಿನದಿಂದ ದಿನಕ್ಕೆ ಪಾಸಿಟಿವ್ ಸಂಖ್ಯೆ ಹೆಚ್ಚಾಗುತ್ತಿದೆ. ಬೇರೆ ರಾಷ್ಟ್ರಗಳಲ್ಲಿ ಸಾವಿನ ಸಂಖ್ಯೆ ಜಾಸ್ತಿ ಇದೆ. ಭಾರತೀಯರಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿದೆ. ಇಂದು ಜೀವ ಉಳಿಸಿಕೊಳ್ಳುವುದು ಮತ್ತು ಜೀವನ ನಡೆಸುವುದು ಸಹ ಸವಾಲಿನಿಂದ ಕೂಡಿದೆ. ಜೀವನ ನಿರ್ವಹಣೆಗೆ ಕೇಂದ್ರ ಹಾಗು ರಾಜ್ಯಸರ್ಕಾರಗಳು ಪರವಾನಿಗೆ ಕೊಟ್ಟಿವೆ. ನಿಸರ್ಗದ ವೈಪರೀತ್ಯಗಳು ಇಂದು ಆಗುತ್ತಿವೆ. ಚಂಡಮಾರುತದಂತಹ ಸಂಕಷ್ಟಗಳು ಬಂದೊದಗಿವೆ. ಇಂತಹ ಪ್ರಕೋಪಗಳು ಮಾನವ ಸಮಾಜವನ್ನು ಕಾಡುತ್ತಿವೆ. ಆದುದರಿಂದ ಪರಿಸರವನ್ನು ಉಳಿಸಿಕೊಳ್ಳಬೇಕಿದೆ. ಹೇಗೆ ಮಾನವ ಸಂತತಿ ಬೆಳೆಯುತ್ತದೆಯೋ ಹಾಗೆಯೇ ವೃಕ್ಷ ಸಂತಾನ ಬೆಳೆಸಬೇಕು. ಮಕ್ಕಳನ್ನು ಪೆÇೀಷಿಸಿದಂತೆ ವೃಕ್ಷವನ್ನು ಪೆÇೀಷಿಸಬೇಕು. ಪರಿಸರ ದಿನದಂದು ಮಾತ್ರವಲ್ಲ ಎಲ್ಲ ದಿನವೂ ವೃಕ್ಷಗಳನ್ನು ಪೆÇೀಷಿಸಬೇಕು. ಎಲ್ಲಿ ಗಿಡ-ಮರಗಳು ಹೆಚ್ಚು ಇರುತ್ತವೆಯೋ ಅಲ್ಲಿ ಸಮೃದ್ಧಿ ಇರುತ್ತದೆ ಎಂದು ತಿಳಿಸಿದರು.

ಮುಖ್ಯಅತಿಥಿ ಚಿತ್ರದುರ್ಗ ಜಿಲ್ಲಾ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ರಾಘವೇಂದ್ರರಾವ್ ಮಾತನಾಡಿ, ವಿಶ್ವಪರಿಸರ ದಿನಾಚರಣೆ ಅಂಗವಾಗಿ ಪ್ರಜೆಗಳಾದ ನಾವು ಸಾಕಷ್ಟು ಸಂಕಷ್ಟ ಎದುರಿಸುತ್ತಿz್ದÉೀವೆ. ಎಲ್ಲವು ಪರಿಸರದ ಅಸಮತೋಲನದಿಂದ ಅನುಭವಿಸುತ್ತಿz್ದÉೀವೆ.

ಹಿಂದಿನ ಋಷಿಮುನಿಗಳು, ವೇದಗಳಲ್ಲಿಯೂ ಸಹ ಪರಿಸರ ಉಳಿಸಿ, ಜೀವ ಸಂಕುಲ ಉಳಿಸಿ ಎಂದು ಹೇಳಿದ್ದಾರೆ. ನಾವು ಈಗಲೂ ಅದನ್ನು ಮುಂದುವರೆಸುತ್ತಿz್ದÉೀವೆ. ಪರಿಸರದಿಂದ ಅನೇಕ ಪ್ರಯೋಜಗಳು ಇವೆ. ಪರಿಸರವನ್ನು ಅರಣ್ಯ ಇಲಾಖೆಯವರು ಮಾತ್ರ ಉಳಿಸುವುದಲ್ಲ. ಅದು ನಮ್ಮೆಲ್ಲರ ಆದ್ಯ ಕರ್ತವ್ಯವೂ ಹೌದು. ಪರಿಸರ ಉಳಿಸಲು 5ನೇ ತಾರೀಖು ಮಾತ್ರವಲ್ಲ ಅದು ಪ್ರತಿದಿನವೂ ಸಾಗಬೇಕು. ಜೀವವೈವಿಧ್ಯತೆಯನ್ನು ಕಾಪಾಡಬೇಕಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಿಟುವಳ್ಳಿ ಗ್ರಾಮದ ವಿ. ಮೋಹನ್ (ಲಿಂಗಾಯತ) ಮತ್ತು ಎಂ.ಮೇಘನ (ಆದಿಕರ್ನಾಟಕ) ಒಂದು ಅಂತರ್ಜಾತಿ ವಿವಾಹ ಸೇರಿದಂತೆ 10 ಜೋಡಿಗಳ ವಿವಾಹ ನಡೆಯಿತು. ವಧು-ವರರು ಮಾಸ್ಕ್ ಧರಿಸಿ, ಸ್ಯಾನಿಟೈಸರ್ ಹಾಕಿಕೊಂಡು, ಸಾಮಾಜಿಕ ಅಂತರ ಕಾಪಾಡುವಂತೆ ವ್ಯವಸ್ಥೆ ಮಾಡಲಾಗಿತ್ತು.

ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ಚಂದ್ರಶೇಖರ ನಾಯಕ್, ವಲಯ ಅರಣ್ಯಾಧಿಕಾರಿ ಸಂದೀಪ್, ಜಿಲ್ಲಾ ಅರಣ್ಯಾಧಿಕಾರಿ ಚೋಳರಾಜಪ್ಪ, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಕಾರ್ಯನಿರ್ವಹಣಾಧಿಕಾರಿ ಎಂ.ಜಿ.ದೊರೆಸ್ವಾಮಿ, ಕೆಇಬಿ ಷಣ್ಮುಖಪ್ಪ, ಪೈಲ್ವಾನ್ ತಿಪ್ಪೇಸ್ವಾಮಿ ಮುಂತಾದವರಿದ್ದರು.

ಜಮುರಾ ಕಲಾವಿದರು ಪ್ರಾರ್ಥಿಸಿದರು. ಪೆÇ್ರ.ಸಿ.ಎಂ. ಚಂದ್ರಪ್ಪ ಸ್ವಾಗತಿಸಿದರು. ಬಸವರಾಜಶಾಸ್ತ್ರಿ ನಿರೂಪಿಸಿದರು. ಜ್ಞಾನಮೂರ್ತಿ ಶರಣು ಸಮರ್ಪಣೆ ಮಾಡಿದರು.






ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ
ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ (ರಿ.)
ಕರ್ನಾಟಕ ಅರಣ್ಯ ಇಲಾಖೆ, ಚಿತ್ರದುರ್ಗ
ಮೂವತ್ತನೇ ವರ್ಷದ ಆರನೇ ತಿಂಗಳ
ಸಾಮೂಹಿಕ ಕಲ್ಯಾಣ ಮಹೋತ್ಸವ ಮತ್ತು
ವಿಶ್ವ ಪರಿಸರ ದಿನಾಚರಣೆ
ಅಧ್ಯಕ್ಷತೆ :- ಡಾ. ಶಿವಮೂರ್ತಿ ಮುರುಘಾ ಶರಣರು


ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ
ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ (ರಿ.)
ಕರ್ನಾಟಕ ಅರಣ್ಯ ಇಲಾಖೆ, ಚಿತ್ರದುರ್ಗ
ಮೂವತ್ತನೇ ವರ್ಷದ ಆರನೇ ತಿಂಗಳ
ಸಾಮೂಹಿಕ ಕಲ್ಯಾಣ ಮಹೋತ್ಸವ ಮತ್ತು
ವಿಶ್ವ ಪರಿಸರ ದಿನಾಚರಣೆ
ಅಧ್ಯಕ್ಷತೆ :- ಡಾ. ಶಿವಮೂರ್ತಿ ಮುರುಘಾ ಶರಣರು
ದಿನಾಂಕ : 05-06-2020 ಶುಕ್ರವಾರ










ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ
ಎಸ್.ಜೆ.ಎಂ. ಶಾಂತಿ ಮತ್ತು ಪ್ರಗತಿ ಫೌಂಡೇಶನ್ (ರಿ.)
ಕರ್ನಾಟಕ ಅರಣ್ಯ ಇಲಾಖೆ, ಚಿತ್ರದುರ್ಗ
ಮೂವತ್ತನೇ ವರ್ಷದ ಆರನೇ ತಿಂಗಳ
ಸಾಮೂಹಿಕ ಕಲ್ಯಾಣ ಮಹೋತ್ಸವ ಮತ್ತು
ವಿಶ್ವ ಪರಿಸರ ದಿನಾಚರಣೆ
ಅಧ್ಯಕ್ಷತೆ : ಡಾ. ಶಿವಮೂರ್ತಿ ಮುರುಘಾ ಶರಣರು